**ದಿನಾಂಕಃ 02.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 1 ಮತ್ತು 2ನೇ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ಹುಟ್ಟಿದ ದಿನಾಂಕಃ 12.05.1978. ನನ್ನ ತಾಯಿಯ ಹೆಸರು ಲಕ್ಷ್ಮಿ. ವಾದಿಗೆ ನಾಲ್ಕು ಜನ ಮಕ್ಕಳು. ವಾದಿಯ ಹೆಸರು ಮಾರಕ್ಕಾಳ್ ಅಲ್ಲ ಮಾರತ್ತಾಳ್ ಎಂದರೆ ಸಾಕ್ಷಿಯು ಎರಡು ಹೆಸರು ವಾದಿಯದಿರುತ್ತದೆ ಎಂದು ಉತ್ತರಿಸುತ್ತಾರೆ. ಎರಡು ಹೆಸರು ವಾದಿಗೆ ಸೇರಿರುವ ಬಗ್ಗೆ ತೋರಿಸಲು ದಾಖಲೆ ಇದೆ. ಸತ್ಯಮಂಗಲದಲ್ಲಿ ಬಿಇಒ ಕಛೇರಿಯಿಂದ ಪಡೆದಿರುವ ದಾಖಲೆ ಇರುತ್ತದೆ. ಕನಾರ್ಟಕ ರಾಜ್ಯದಲ್ಲಿ ಆ ಬಗ್ಗೆ ದಾಖಲೆಯನ್ನು ಪಡೆದುಕೊಂಡಿಲ್ಲ. ವಾದಿಗೆ ಎರಡು ಹೆಣ್ಣುಮಕ್ಕಳು ಎರಡು ಗಂಡು ಮಕ್ಕಳು ಅವರ ಹೆಸರುಗಳು ರಾಜಮಣಿ, ಸೆಲ್ವರಾಜು, ಲಕ್ಷ್ಮಿ, ಪಳನಿಸ್ವಾಮಿ. ನನ್ನ ತಂದೆಯ ಹೆಸರು ಪಳನಿಸ್ವಾಮಿ ತಾಯಿಯ ಹೆಸರು ಲಕ್ಷ್ಮಿ. ವಾದಿ ತಮಿಳುನಾಡಿನಲ್ಲಿ ಮತ ಚಲಾಯಿಸುತ್ತಾರೆ. ವಾದಿಯ ಮದುವೆ ಯಾವಾಗ ಆಯಿತೆಂದು ನನಗೆ ಗೊತ್ತಿಲ್ಲ. ವಾದಿಯು ಎಲ್ಲಿ ಹುಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ವಾದಿಗೆ ಕನ್ನಡ ಬರುತ್ತಿತ್ತು. ವಾದಿಯು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ತಾಯಿ ಲಕ್ಷ್ಮಿ ಕೂಡ ವಿದ್ಯಾಭ್ಯಾಸ ಮಾಡಿಲ್ಲ. ವಾದಿಯ ಗಂಡನ ಹೆಸರು ಅಮಾಸೆಗೌಂಡರ್ ಅವರ ಊರು ಹಲಗುಮೂಲೆ. ಹಲಗುಮೂಲೆಯಲ್ಲಿ ವಾದಿಯ ಮನೆ ಇಲ್ಲ ಅಲ್ಲಿ ಗಲಾಟೆಯಾದಾಗ ಊರು ಬಿಟ್ಟು ಹೊರಟು ಹೋಗಿರುತ್ತಾರೆ.

ಅಮಾಸೆಗೌಂಡರ್ ಎಲ್ಲಿ ಮತ ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಕಾವೇರಿ ನೀರಿನ ಗಲಾಟೆಯಾದ ಪೂರ್ವದಲ್ಲಿ ವಾದಿಯು ವಾಸವಿದ್ದ ಬಗ್ಗೆ ವಿಳಾಸದ ದಾಖಲೆ ಕೊಟ್ಟಿರುವುದಿಲ್ಲ. ಕಾವೇರಿ ನೀರಿನ ಬಗ್ಗೆ ಏನೇನು ಗಲಾಟೆ ಮತ್ತು ಯಾರು ಯಾರಿಗೆ ಆಯಿತೆಂದು ನನಗೆ ಗೊತ್ತಿಲ್ಲ. ವಾದಿಯ ಜಾತಿ ಕೊಂಗವೆಲ್ಲಾಳ. ಸದರಿ ಜಾತಿ ತಮಿಳುನಾಡಿನಲ್ಲಿ ಬಿ ಗ್ರೂಪಿಗೆ ಬರುತ್ತದೆ. ಕರ್ನಾಟಕದಲ್ಲಿ ಕೊಂಗವೆಲ್ಲಾಳ ಜಾತಿ ಇರುವುದಿಲ್ಲ. ಕಾವೇರಿ ನೀರಿನ ಗಲಾಟೆಯಾದಾಗ ಆರೋಪಿಗಳ ವಿರುದ್ಧ ದೋಷಾರೋಪಣೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಹಲಗುಮೂಲೆ ಹನೂರು ಪೋಲಿಸ್ ಠಾಣಾ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಆ ಬಗ್ಗೆ ಪೋಲಿಸ್ ದಾಖಲೆಯನ್ನು ನಾನು ತೆಗೆದುಕೊಂಡಿರುವುದಿಲ್ಲ. ಹಲಗುಮೂಲೆಯಲ್ಲಿ ಏನೆಲ್ಲಾ ಆಸ್ತಿಗಳಿತ್ತು ಮತ್ತು ಏನೆಲ್ಲಾ ದಾಖಲೆಗಳಿತ್ತು ಎಂದು ಲಿಸ್ಟ್ ಇರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಎ.ಜೆ. ಸದಾಶಿವರವರನ್ನು ಉಚ್ಛ ನ್ಯಾಯಾಲಯದ ನ್ಯಾಯಾಧೀಶರನ್ನು ಕಮೀಷನರ್ ಆಗಿ ನೇಮಕ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಗಲಾಟೆಯ ಬಗ್ಗೆ ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜ್ ಕೊಟ್ಟಿರುವ ರಿಪೋರ್ಟು ನನಗೆ ಗೊತ್ತಿರುವುದಿಲ್ಲ. ಕಮೀಷನರ್ ಮುಂದೆ ವಾದಿ ದೂರು ಕೊಟ್ಟಿದ್ದಾರಾ ಎಂದು ನನಗೆ ಗೊತ್ತಿಲ್ಲ.

ಹಲಗುಮೂಲೆ ಗ್ರಾಮದಲ್ಲಿ ಸರ್ವೆ ನಂ. 287 ಇದೆಯಾ ಎಂದು ನನಗೆ ಗೊತ್ತಿಲ್ಲ. ವಾದಿಗೆ ದಾವಾ ಸ್ವತ್ತನ್ನು ಹೊರತು ಪಡಿಸಿ 4 ಎಕರೆ 28 ಸೆಂಟು ಜಮೀನಿತ್ತು. ವಾದಿಯ ಹೆಸರಿನಲ್ಲಿ ಇದೇ ನ್ಯಾಯಾಲಯದಲ್ಲಿ ನಾಲ್ಕು ಕೇಸು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಇನ್ನೊಂದು ಕೇಸು ಇದೆ ಎಂದು ಉತ್ತರಿಸುತ್ತಾರೆ. ವಾದಿ ಮತ್ತು ಮಕ್ಕಳು ಓ ಎಸ್ ನಂ. 2/2019ನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತು. ಅದು ಯಾವ ಸರ್ವೆ ನಂಬರಿಗೆ

ಸೇರಿದೆಯೆಂದು ನನಗೆ ಗೊತ್ತಿಲ್ಲ. ಅದು ನನ್ನ ಸೋದರಮಾವ ಸೆಲ್ವರಾಜುವಿಗೆ ಗೊತ್ತಿರುತ್ತದೆ ಎಂದು ಉತ್ತರಿಸುತ್ತಾರೆ.

**1 ಮತ್ತು 2ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

ಫ್ರಾಸಾ 1 ರವರು ತಮಿಳು ಮಾತನಾಡುತ್ತಿದ್ದ ಕಾರಣ ಅವರಿಗೆ ಪಾಟೀ ಸವಾಲನ್ನು ತಮಿಳಿಗೆ ವಕೀಲರ ಮೂಲಕ ತರ್ಜುಮೆ ಮಾಡಿರುತ್ತೇವೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.